ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಯೋಜನೆ ವರ್ಷ	ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	ಒಟ್ಟು
ಐಆರ್‌ಡಿಪಿ:			
೧೯೮೬-೮೭	೧೦೮೬.೯೧೦	೧೦೮೬.೯೧೦	೨೧೭೩.೮೨೦
೧೯೮೭-೮೮	೧೨೯೬.೭೩೧	೧೨೯೬.೭೩೧	೨೫೯೩.೪೬೨
೧೯೮೮-೮೯	೧೪೪೬.೬೫೦	೧೪೪೬.೬೫೦	೨೯೭೩.೩೦೦
ಎನ್‌ಆರ್‌ಇಪಿ:			
೧೯೮೬-೮೭	೧೨೧೦.೦೦೦	೧೨೧೦.೦೮೦	೨೪೨೦.೦೦೦
೧೯೮೭-೮೮	೧೫೨೪,೩೫೫	೧೫೨೪.೩೫೫	೩೦೪೮.೭೧೦
೧೯೮೮-೮೯	೧೭೨೩.೦೮೦	೧೭೨೩.೦೮೦	೩೪೪೬.೦೦೦
ಆರ್‌ಎಲ್‌ಇಜಿಪಿ			
೧೯೮೬-೮೭	೨೩೫೦.೦೦೦	—	೨೩೫೦.೦೦೦
೧೯೮೭-೮೮	೨೩೩೫.೦೦೦	೭೭.೫೧೪	೨೪೧೨.೫೧೪
೧೯೮೮-೮೯	೨೪೧೦.೦೦೦	೪೬.೦೦೦	೨೪೫೬.೦೦೦

ಅ) ಇಲ್ಲಾ

ಇ) ಉದ್ಭವಿಸುವುದಿಲ್ಲ,

ಬೆಂಗಳೂರಿಂ ದೂರದರ್ಶನದ ಎರಡನೆ ಚಾನೆಲ್ ಬಗ್ಗೆ

೨೯೨೭. ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು).—ಮಾನ್ಯ ವಾರ್ತಾ ಪ್ರಸಾರೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದೂರದರ್ಶನದ ಎರಡನೆ ಚಾನಲ್ ಬಗ್ಗೆ ಹಾಲಿ ರಾಜ್ಯದ ನಿಲುವೇನು?

ಆ) ದೇಶದ ಇತರೇ ರಾಜ್ಯಗಳಿಗೆ ಎರಡನೆ ಚಾನಲ್‌ಗಳನ್ನು ನೀಡಿರುವುದಾಗಿ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರ ಪಕ್ಷಪಾತ ತೋರಿರುವುದರ ಬಗ್ಗೆ ರಾಜ್ಯ ವಿರೋಧಿಸಿಲ್ಲವೆ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರಸಾರೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ಬೇಡಿಕೆಗೆ ಕೇಂದ್ರ ಸರ್ಕಾರ ಇನ್ನೂ ಒಪ್ಪಿಗೆ ನೀಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರಿಂ ದೂರದರ್ಶನ ಕನ್ನಡ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ದೂರದರ್ಶನ ಕೇಂದ್ರಗಳಲ್ಲಿ ಪ್ರಸಾರ ಮಾಡದೆ ಇರುವ ಬಗ್ಗೆ

೪೦೪೪. ಶ್ರೀ ವಿ.ಸಿ. ಮಂಜಿನಸ್ವಾಮಪ್ಪ,(ದೇವನಹಳ್ಳಿ).—ಮಾನ್ಯ ವಾರ್ತಾ,ಪ್ರಸಾರೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದೂರದರ್ಶನ ಕನ್ನಡ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ದೂರದರ್ಶನ ಕೇಂದ್ರಗಳಲ್ಲಿಯೂ ಪ್ರಸಾರ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ರಾಜ್ಯಾದ್ಯಂತ ಕನ್ನಡ ಕಾರ್ಯಕ್ರಮಗಳನ್ನು ದೂರದರ್ಶನ ಕೇಂದ್ರಗಳಲ್ಲಿ ಪ್ರಸಾರ ಮಾಡುವಂತೆ ಮಾಡಲು ಕೈಗೊಂಡ ಕ್ರಮ ಏನು?